ಶ್ರೀ ಬಿ. ಸೋಮಶೇಖರ್.—ಯಾವುದ್ಯಾವುದಕ್ಕೆ ಎಷ್ಟೆಷ್ಟು ಹಣ ಎಂದು ನಿಗದಿಪಡಿಸಿದ್ದಾರೋ ಅದಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ನಮಗೆ ಎಷ್ಟು ಮಂಜೂರಾಗುತ್ತದೆಯೋ ಅಷ್ಟನ್ನು ತೆಗೆದುಕೊಳ್ಳುತ್ತೇವೆ. ನಂತರ ಫಾರ್ಮಲ್ ಎಜುಕೇಷನ್ ಎಲ್ಲಿ ಕೊಡಬೇಕು ಮತ್ತು ಇನ್‌ಫಾರ್ಮಲ್ ಎಜುಕೇಷನನ್ನು ಎಲ್ಲಿ ಕೊಡಬೇಕೆಂದು ನಾವು ತೀರ್ಮಾನ ಮಾಡುತ್ತೇವೆ. ಎಲ್ಲಾ ಕಡೆಯಲ್ಲೂ ಒಂದೇ ತರಹದ ಶಿಕ್ಷಣವನ್ನು ನಾವು ಕೊಡುವುದಿಲ್ಲ. ಮಾನ್ಯ ಸದಸ್ಯರು ಅದರ ಬಗ್ಗೆ ತಮ್ಮ ಅನುಮಾನವನ್ನು ವ್ಯಕ್ತಪಡಿಸಬೇಕಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಇನ್‌ಫಾರ್ಮಲ್ ಎಜುಕೇಷನನ್ನು ಏನು ಮಾಡುತ್ತೀರಿ, ಫಾರ್ಮಲ್‌ನಲ್ಲಿ ವಿದ್ಯಾರ್ಥಿಗೆ ಪಾಠಶಾಲೆಯಲ್ಲಿಯೇ ಉಪಾಧ್ಯಾಯರು ಪಾಠ ಹೇಳಿ ಕೊಟ್ಟರೂ ಸರಿಯಾಗಿ ಕಲಿಯುವುದಿಲ್ಲ. ನೀವು ಇನ್-ಫಾರ್ಮಲ್ ಎಜುಕೇಷನನ್ನು ತರುವುದಕ್ಕೆ ಒಪ್ಪುತ್ತೀರಾ ? ಇದರಿಂದ ಬಡ ವಿದ್ಯಾರ್ಥಿಗಳಿಗೂ ಕೂಡಾ ತೊಂದರೆಯಾಗುತ್ತದೆ. ಇದು ತಮಗೆ ಗೊತ್ತಿಲ್ಲವೇ ? ಈ ತತ್ವಗಳನ್ನು ಸತ್ವಶಃ ಒಪ್ಪಿಕೊಂಡಿರುವ ಆ ತತ್ವಗಳು ಏನು ?

ಶ್ರೀ ಬಿ. ಸೋಮಶೇಖರ್.—ಅಧ್ಯಕ್ಷರೇ, ಸಂಪೂರ್ಣವಾಗಿ ಇದನ್ನು ತೆಗೆದುಹಾಕಿಲ್ಲ. ಈ ಫಾರ್ಮಲ್ ಎಜುಕೇಷನನ್ನು ಬಲಪಡಿಸುತ್ತೇವೆ. ಇದನ್ನು ಸಂಪೂರ್ಣವಾಗಿ ತೆಗೆದುಹಾಕುತ್ತೇವೆ ಎಂದು ಹೇಳುವುದು ತಪ್ಪು. ಇದನ್ನು ಬಲಪಡಿಸುತ್ತೇವೆ.

ಖಾಸಗೀ ಪಾಲಿಟೆಕ್ನಿಕ್‌ಗಳ ಗುಣಮಟ್ಟ

೧೨೧೮. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲು ಪೇಟೆ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ಪಾಲಿಟೆಕ್ನಿಕ್‌ಗಳ ಗುಣಮಟ್ಟವನ್ನು ಪರೀಕ್ಷೆ ಮಾಡುವುದಕ್ಕೆ ಡಾ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸರ್ಕಾರದವರು ಸಮಿತಿಯೊಂದನ್ನು ನೇಮಕ ಮಾಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಸಮಿತಿಯು ಸರ್ಕಾರದವರಿಗೆ ತನ್ನ ವರದಿಯನ್ನು ಸಲ್ಲಿಸಿದ್ದಾರೆಯೇ ? ಹಾಗೂ ಎಷ್ಟು ಪಾಲಿಟೆಕ್ನಿಕ್‌ಗಳು ಸರ್ಕಾರದ ನಿಯಮದಂತೆ ಗುಣಮಟ್ಟವನ್ನು ಹೊಂದಿಲ್ಲವೆಂದು ವರದಿಯಲ್ಲಿ ತಿಳಿಸಿದ್ದಾರೆ ? (ಅವುಗಳ ಹೆಸರು ಮತ್ತು ವಿಳಾಸದ ವಿವರ ತಿಳಿಸುವುದು).

ಇ) ಸದರಿ ವರದಿಯಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ನಿಜ.

ಆ) ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯು ೧೨೫ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಪರಿಶೀಲಿಸಿ ಸರ್ಕಾರದ ನಿಯಮದಂತೆ ಗುಣಮಟ್ಟವನ್ನು ಹೊಂದಿಲ್ಲವೆಂದು ೨೬ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಮುಚ್ಚಲು ಹಾಗೂ ೨೨ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಕೆಲವು ಕೋರ್ಸ್‌ಗಳನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿದೆ. ಈ ಪಾಲಿಟೆಕ್ನಿಕ್‌ಗಳ ಹೆಸರುಗಳನ್ನು ಮತ್ತು ವಿಳಾಸಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಇ) ಸರ್ಕಾರವು ತಜ್ಞರ ಸಮಿತಿಯ ವರದಿಯನ್ನು ತಾತ್ವಿಕವಾಗಿ ಒಪ್ಪಿದೆ. ೨೬ ಪಾಲಿಟೆಕ್ನಿಕ್‌ಗಳನ್ನು ಮುಚ್ಚಲು ಹಾಗೂ ೨೨ ಪಾಲಿಟೆಕ್ನಿಕ್‌ಗಳಲ್ಲಿನ ಕೋರ್ಸುಗಳನ್ನು ತೆಗೆದುಹಾಕುವ ಬಗ್ಗೆ ಸಮಿತಿಯು ಮಾಡಿರುವ ಶಿಫಾರಸ್ಸಿನ ಬಗ್ಗೆ ಸದರಿ ಆಡಳಿತ ಮಂಡಳಿಯವರಿಗೆ ಸೂಕ್ತ ಅವಕಾಶ ನೀಡಿ ಅವರ ಹೇಳಿಕೆ ಪಡೆಯಲು ಶೋಕಾಸ್ ನೋಟಿಸುಗಳನ್ನು ಜಾರಿ ಮಾಡಲಾಗಿದೆ. ಸಮಿತಿಯು ಮಾಡಿರುವ ಇತರ ಶಿಫಾರಸ್ಸುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ANNEXURE-I

Names and Address of Private (Un-Aided) Polytechnics recommended by the Expert Committee to be closed.—

1 Karnatak Institute of Engineering and Technology, 281, 26th Cross, 8th Main, Bhanashankari II Stage, Bangalore-70

2 Children Education Society's, Oxford Polytechnic, Ist Phase, J.P. Nagar, Bangalore-70

3 Central Muslim Association's Mahamood Shariff Polytechnic, Yeshvanthpur, Bangalore-22

4 Christian Society for Professional and Higher Education's Mahatma Gandhi Polytechnic, Bangalore

5 Impact Polytechnic, Kodigehalli, Bangalore North Taluk,

6 Reddy Jana Sangha Polytechnic, Koramangala, Bangalore.

7 Visveswaraya Educational Trust's Polytechnic, Siddalaghatta, Kolar District.

8 Kolar Jilla Technical Education Trust's Polytechnic, Mulbagal, Kolar District.

9 Noorie Educational Society's Polytechnic, S.M.M. School Road, Andersonpet, K.G.F. Kolar District.

10 Kalidasa Vidyavardhaka Sangha's Polytechnic, Sira, Tumkur District.

11 Saraswathi Educational Society's Polytechnic, Bidarakere, Sira Taluk, Tumkur District

12 Sree Ranga Educational Trust's Polytechnic, Gorukere, Kataveeranahalli, Sira Taluk, Tumkur District

13 Sadguru Sri Kadimutt Mahavidya Peetha's Polytechnic, Harnahalli Arsikere Taluk, Hassan District

14 Sree Jagadguru Murugarajendra Vidyapeetha's Polytechnic, Davanagere-2, Chitradurga District.

15 Janath Educational Society's Rural Polytechnic, Hangal, Dharwad District

16 Gadag-Betgeri Shikshana Samithi's Rotti Somppa Polytechnic, Gadag, Dharwad District.

17 S.P. Mandal Karnataka Area Committee's Polytechnic, Raibag-591397, Belgaum District

18 Karnataka Kurubara Sangha's Vijayanagara Vidya Gangothri Polytechnic, Rampur, Raichur District

19 Vocational Education Society's Polytechnic, Yadgir, Gulbarga District

20 Modern Education Society's Polytechnic, Shastri Chowk, Shahbad. Gulbarga District

21 Al-Ameen Taj Quareshi Polytechnic, Basavakalyan, Bibar District

22 Nittur Education Society's Polytechnic, Nittur, Bhalki Taluk, Bidar District

23 Samatha Prathishtan Karya Samithi's Dr. B.R. Ambedkar Polytechnic, Aurad, Bidar District.

24 Veerapulakeshi Vidyavardhaka Samsthe's Polytechnic, Badami, Bijapur District.

25 Sahakari Shikshana Prasarka Samithi's Polytechnic Siddapura. Uttara Kannada District

26 Janatha Praveen Education Society's Polytechnic, Humnabad Bidar District

ANNEXURE-II

Names and Address of Private (Un-aided) Polytechnics and Courses Recommended by the Expert Committee to be discontinued

Sl. No.	Names of Private Polytechnics	Courses to be discontinued
1	2	3
1	Balaji Education Trust's Venkataraju Institute of Technology 100ft Road, 15th Cross, J.P. Nagar, 6th Phase, Bangalore	1 Mechanical (Machine Tool Technology) 2 Electrical 3 Mechanical (General)
2	Saraswathi Education Society's Polytechnic, '0' Danial Road, Andersonpet, K.G.F. Kolar District	Mechanical (General)
3	Anand Marg Education Relief Welfare Centre Society's Polytechnic Malur (Kolar District)	Mechanical (Machine Tool Technology)
4	Sri Jagadguru Murugarajendra Vidyapeetha's Polytechnic, Tiptur (Tumkur District)	Civil Engineering (General)
5	Sri Jagadguru Murugarajendra Vidyapeetha's Polytechnic, Birur Chickmagalur District	Civil Engineering (General)
6	J.S.S. Mahavidva Peetha's Polytechnic Nanjangud (Mysore District)	1 Civil Engineering (General) 2 Mechanical (General)
7	Bharathi Education Trust's Polytechnic, Bharathinagar, K.M. Doddi (Mandya District)	1 Civil Engineering (General) 2 Mechanical (General)
8	Madari Vidyasamthe's M.V.S. Polytechnic Nagamangala (Mandya District)	1 Meachanical (General) 2 Automobile Technology
9	Sahyadri Trust's Polytechnic Thirthahalli (Shimoga District)	1 Mechanical (General) 2 Electrical (General) 3 Tele-communication (Electronics)
10	Navodaya Vidya Trust's N.E.S. Polytechnic, Doddakunche, Channarayapatha Taluk Hassan District	1 Civil (General) 2 Mechanical (General)

1	2	3
11	Millath Education and Welfare Society's Polytechnic, Davangere	Mechanical (General)
12	Gnanavikasa Education Centre's Polytechnic, Jagalur (Chitradurga District)	Mechanical (General)
13	Sri Jagadguru Panchchanja Viswadharma Vidhyapeetha's Polytechnic, Kodiyala Dharwar District	Electrical
14	Anjuman-E-Islam's Polytechnic, Visvesvaraya Road, Gadag (Dharwar District)	1 Tele-communication (Electronics) 2 Electrical
15	Tippu Shaheed Institute of Technology, Tabib Land, Hubli-20	1 Automobile Technology 2 Tele-communication (Electronics)
16	Sri Jagadguru Murugarajendra Vidyapeetha's, Ulvi Channa-basavesara Polytechnic, Dandeli, (Uttar Kannada District)	Tele-communication (Electronics)
17	Sri Shivaji Education Society's Polytechnic, Ulga, (Uttar Kannada District)	Automobile Technology
18	Gomatesha Vidya Peetha's Polytechnic Gomateshanagar, Hindwadi, Belgaum-11	1 Electrical 2 Tele--communication (Sound & T.V.)
19	The Progressive Education Trust's S.R. Vastrad Rural Polytechnic, Guledgud (Bijapur District)	1 Tele-.communication (Electronics) 2 Civil (General)
20	Veerasaiva Vidyavardhaka Association M.G.V.C. Polytechnic, Muddebihal (Bijapur District)	Civil (General)
21	New Education Society's Polytechnic Kallur (Raichur District)	1 Automobile Tech-nology 2 Mechanical (General)
22	Nagavi Education Society's Polyteehnic Chitapur (Gulbarga District)	Tele-communication (Electronics)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ —ಅಧ್ಯಕ್ಷರೇ, ಈ ಪಾಲಿಟೆಕ್ನಿಕ್‌ಗಳಿಗೆ ಮಂಜೂರಾತಿ ಕೊಡುವಾಗ ನಿಯಮಗಳು ಏನು ಇವೆ ? ಮತ್ತು ಯಾವ ತರಹ ಇದ್ದರೆ ಪಾಲಿಟೆಕ್ನಿಕ್ ಎಂದು ಕೊಡುತ್ತೀರಿ, ಇದಕ್ಕೆ ಸರ್ಕಾರದಲ್ಲಿ ನಿಯಮ ಏನಾದರೂ ಇದೆಯೇ ? ಇವುಗಳನ್ನು ಯಾರ ಕಾಲದಲ್ಲಿ ಕೊಟ್ಟಿರಿ ? ಆ ರೀತಿ ಕೊಟ್ಟು ಎಷ್ಟು ವರ್ಷ ಆಯಿತು ? ಆ ರೀತಿ ಕೊಡುವಾಗ ಫೀಸ್ ಎಷ್ಟು ಕೊಡಬೇಕು ಎಂದು ನಿಗಧಿ ಮಾಡಿದ್ದಿರಿ. ಇಷ್ಟು ವರ್ಷಗಳವರೆಗೆ ಆ ವಿದ್ಯಾರ್ಥಿಗಳು ಏನು ಓದಿದ್ದಾರೆ ಅವರಿಗೆ ಯಾವ ತರಹದ ಟೀಚಿಂಗ್ ಇಲ್ಲದೇ ಈ ರೀತಿ ಪಜಾ ಮಾಡಬೇಕು ಎಂದು ಈ ಸಮಿತಿಯವರು ಶಿಫಾರಸ್ಸು ಮಾಡಿದ್ದಾರಲ್ಲ, ಈ ರೀತಿ ಆದರೆ ಆ ವಿದ್ಯಾರ್ಥಿಗಳ ಗತಿಯೇನು ?

ಶ್ರೀ ಜೀವರಾಜ ಆಳ್ವ.—ಅಧ್ಯಕ್ಷರೇ ಸರ್ಕಾರ ನಿಗದಿಪಡಿಸಿರುವ ರೀತ್ಯಾ ಆ ಪರಿಮಿತಿಯ ಒಳಗೆ ಈ ಪಾಲಿಟೆಕ್ನಿಕ್‌ಗಳಿಗೆ ಅನುಮತಿಯನ್ನು ಕೊಟ್ಟಿದೆ. ಇನ್ನು ಮಾನ್ಯ ವಿರೋಧ ಪಕ್ಷದ ನಾಯಕಿಯವರು ಕೇಳಿರುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ಅದನ್ನು ಅವರಿಗೆ ತಲುಪಿಸುತ್ತೇನೆ ಮತ್ತು ಪಾಲಿಟೆಕ್ನಿಕ್‌ಗಳನ್ನು ಕ್ಲೋಸ್ ಮಾಡಿದರೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತದೆ technicalಆಗಿ closure ಮಾಡಿದರೆ ಎಂದು ಹೇಳಿದ್ದಾರೆ, closure for next year.No new admission will be allowed. We will have to allow them to complete the course. ಕೋರ್ಸ್ ಕಂಪ್ಲೀಟ್ ಆಗುವವರೆಗೆ ಮಾಡುವಂಥ ಒಂದು ಲೀಗಲ್ ಒಪಿನಿಯನ್ ಎಮರ್ಜ್ ಆಗ ಬಹುದು ಎಂದು ಕಾಣುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.—ಹತ್ತಿಪ್ಪತ್ತು ಪಾಲಿಟೆಕ್ನಿಕ್‌ಗಳನ್ನು ಬಂದ್ ಮಾಡುವುದಕ್ಕೆ ಒಪ್ಪಿದೆ ಎಂದು ಹೇಳುತ್ತಿದ್ದೀರಿ ಆದರೆ ಈಗಾಗಲೇ ಅನ್ಯುಯಲ್ ಪೀರಿಯಡ್ ಮುಗಿಯಲಿಕ್ಕೆ ಬಂದಿರುವುದರಿಂದ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳದಿದ್ದರೆ ಹುಡುಗರು ಆ ಕಾಲೇಜುಗಳಿಗೆ ಮತ್ತೆ ಅಡ್ಮಿಷನ್ ಆಗಿ ನಂತರ ಅವರು ತೊಂದರೆ ಅನುಭವಿಸುತ್ತಾರೆ ಈಗ ನೀವು ಮಧ್ಯೆ ಕ್ಲೋಸ್ ಮಾಡಿದರೆ ಸೇರಿರುವ ವಿದ್ಯಾರ್ಥಿಗಳು ಎರಡನೆಯ ವರ್ಷಕ್ಕೆ ಹೋಗಲು ತೊಂದರೆಯಾಗುತ್ತದೆ ನೀವು ಕ್ಲೋಸ್ ಮಾಡಿ ಎಂದು ಹೇಳಿದರೆ ಅವರು ಸರಿಯಾಗಿ ಕಾಲೇಜನ್ನು ನಡೆಸುವುದಕ್ಕಾಗುವುದಿಲ್ಲ ಇದರಿಂದಾಗಿ ಹುಡುಗರಿಗೆ ಬೇಕಾದಂತಹ ಶಿಕ್ಷಣ ದೊರೆಯದೆ ಕೆಳಮಟ್ಟದ ಶಿಕ್ಷಣ ದೊರೆಯಂತ್ತದೆ.ಆದುದರಿಂದ ಆ ಹುಡುಗರಿನ್ನೇ ಬೇಕೆ ಪಾಲಿಟೆಕ್ನಿಕ್‌ಗಳಿಗೆ ಟ್ರಾನ್ಸ್‌ಫರ್ ಮಾಡಿ ಅವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಲು ಗಮನ ಕೊಡುತ್ತೀರಾ ?

ಶ್ರೀ. ಜೀವರಾಜ ಆಳ್ವ.—ತಾವು ಹಿರಿಯ ಸದಸ್ಯರು ಬಹಳ ಉತ್ತಮವಾವ ಸಲಹೆಯನ್ನು ಕೊಟ್ಟಿದ್ದೀರಿ ಅದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಆವರು ಮೊದಲನೆಯ ವರ್ಷ ಈ ಕಾಲೇಜುಗಳಿಗೆ ಏನು ಸೇರಿರುತ್ತಾರೆ ಅಂತಹ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಹಾಗಿದ್ದರೆ ಅಂತಹವರನ್ನು ಪಕ್ಕದಲ್ಲಿರುವಂತಹ ಪಾಲಿಟೆಕ್ನಿಕ್ಸ್‌ಗಳಿಗೆ ಕಳುಹಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಾಲಿಟೆಕ್ನಿಕ್‌ಗಳನ್ನು ಸ್ಯಾಂಕ್ಷನ್ ಮಾಡಬೇಕಾದರೆ ಅದಕ್ಕೆ ಕ್ರೈಟೀರಿಯಾ ಏನು, ಅದಕ್ಕೆ ಏನು ಅರ್ಹತೆ ಇರಬೇಕು, ಎಷ್ಟು ಎಲಿಜಬಲಿಟಿ ಇರಬೇಕು ಎಂದು ಹೇಳಲಿಲ್ಲ ಎರಡನೆಯದಾಗಿ ಹೇಳುವುದಾದರೆ ಈಗ ಪಾಲಿಟೆಕ್ನಿಕ್‌ಗಳಿಗೆ ಏನು ಅನುಮತಿಯನ್ನು ಕೊಟ್ಟಿದ್ದೀರಿ ಅವುಗಳಿಗೆ ಏನು ಕಂಡೀಷನ್ಸ್ ಏನ್ನು ಹಾಕಿದ್ದೀರಿ ಅವನ್ನು ಫುಲ್‌ಫಿಲ್‌ಮಾಡಿದವರಿಗೆ ಅನುಮತಿ ಕೊಟ್ಟಿದ್ದೀರಾ ಇಲ್ಲವೇ ನಿಮ್ಮ ಡಿಸ್ಕ್ರೀಷನ್ ಅನ್ನು ಯೂಸ್ ಮಾಡಿ ಕೊಟ್ಟಿದ್ದೀರಾ ?

ಶ್ರೀ. ಜೀವರಾಜ ಆಳ್ವ —ಅದಕ್ಕೆ ರೂಲ್ಸ್‌ಗಳನ್ನು ಹಾಕಿದ್ದೇವೆ. Apart from the proper infrastructure that is required for the polytechnic. ೫ ಲಕ್ಷ ರೂಪಾಯಿಗಳ ಡಿಪಾಜಿಟ್ ಅನ್ನು ಪ್ರಥಮ ವರ್ಷ ಬ್ಯಾಂಕ್ ಡಿಪಾಜಿಟ್ ಇಡಬೇಕಾಗುತ್ತದೆ ಕರೆಕ್ಟ್ ಆದ ಫಿಗರ್ಸ್ ನನ್ನ ಹತ್ತಿರ ಈಗ ಇಲ್ಲ, ಅದರ ಮೇಲೆ ಪಾಲಿಟೆಕ್ನಿಕ್‌ಗಳನ್ನು ಕೊಡುತ್ತೇವೆ.